ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,
ಹುಣಸೂರು.

**ಸಿ.ಸಿ. ಸಂಖ್ಯೆಃ 311/2018**

ಫಿರ್ಯಾದಿದಾರರುಃ ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು ಃ ಎ 1. ಕಾರ್ತಿಕ್ ಬಿನ್ ದೇವೇಗೌಡ,
ಸುಮಾರು 19 ವರ್ಷ ವಯಸ್ಸು,

ಎ 2. ಹೆಳವೇಗೌಡ @ ನಾಗೇಶ್ ಗೌಡ
ಬಿನ್ ಲೇಟ್ ಡೊಳ್ಳೇಗೌಡ
ಸುಮಾರು 47 ವರ್ಷ ವಯಸ್ಸು,

ಎ 3. ಪ್ರಭಾಕರ ಬಿನ್ ದೇವೇಗೌಡ
ಸುಮಾರು 22 ವರ್ಷ ವಯಸ್ಸು,

ಎ 4. ದೇವೇಗೌಡ ಬಿನ್ ಲೇಟ್ ಡೊಳ್ಳೇಗೌಡ
ಸುಮಾರು 22 ವರ್ಷ ವಯಸ್ಸು,

ಎಲ್ಲರ ವಾಸಃ ಹಿರಿಕ್ಯಾತನಹಳ್ಳಿ ಗ್ರಾಮ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿಃ 10.05.2018 ರಂದು ಸಂಜೆ 04.30 ಗಂಟೆ ಸಮಯದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಮೈಲಾಂಬೂರು ಗ್ರಾಮದ ಸರ್ವೆ ನಂಬರ್ 13 ರ ಜಮೀನಿನಲ್ಲಿ ಸಾಕ್ಷಿ 1 ರವರು ದನಗಳನ್ನು

ಮೇಯಿಸುತ್ತಿದ್ದಾಗ ಸಾಕ್ಷಿ 1 ರವರ ಜಮೀನಿನ ಪಕ್ಕದ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿರುವ 1 ರಿಂದ 4 ನೇ ಆರೋಪಿಗಳಾದ ನಿಮ್ಮ ಇಬ್ಬರ ಜಮೀನುಗಳ ನಡುವೆ ಮಳೆಯ ನೀರು ಹರಿಯಲು ಇದ್ದ ಕಾಲುವೆಯನ್ನು ಆಳವಾಗಿ ತೆಗೆಯುತ್ತಿದ್ದಾಗ ಸಾಕ್ಷಿ 1 ಅವರು ಕಾಲುವೆಯನ್ನು ಆಳವಾಗಿ ತೆಗೆಯಬೇಡಿ ಎಂದು ಹೇಳಿದ್ದಕ್ಕೆ 3 ನೇ ಆರೋಪಿಯಾದ ನೀವು ಏಕಾಏಕಿಯಾಗಿ ಹಿಂಭಾಗದಿಂದ ಬಂದು ಸಾಕ್ಷಿ 1 ಅವರ ಕತ್ತನ್ನು ತಬ್ಬಿಹಿಡಿದುಕೊಂಡು ಅವರಿಗೆ ಮುಂದೆ ಹೋಗದಂತೆ ಅಕ್ರಮ ತಡೆಯನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶಉಳ್ಳವರಾಗಿ, 2 ನೇ ಆರೋಪಿಯಾದ ನೀವು ಕೈಯಿಂದ ಸಾಕ್ಷಿ-1 ಅವರ ಎಡಕಪಾಳಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶಉಳ್ಳವರಾಗಿ, 1 ನೇ ಆರೋಪಿಯಾದ ನೀವು ಕಲ್ಲಿನಿಂದ ಸಾಕ್ಷಿ 1 ಅವರ ಎಡಭುಜಕ್ಕೆ ಹೊಡೆದು ನೋವುಂಟುಮಾಡಿದ್ದು, 4 ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿದ್ದ ಹಗ್ಗದಿಂದ ಸಾಕ್ಷಿ 1 ಅವರ ಕುತ್ತಿಗೆಗೆ ಹೊಡೆದು ಮತ್ತು ಕೈಯಿಂದ ಸಾಕ್ಷಿ 1 ಅವರ ಕುತ್ತಿಗೆಯ ಬಳಿ ಪರಚಿ ಗಾಯಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ರೀತ್ಯಾ

ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ನಾಲ್ಕನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4ನೇ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶಉಳ್ಳವರಾಗಿ, 4ನೇ ಆರೋಪಿಯಾದ ನೀವು ಸಾಕ್ಷಿ -1 ರವರಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

5. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4ನೇ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶಉಳ್ಳವರಾಗಿ, ಸಾಕ್ಷಿ -1 ರವರಿಗೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

(ಮನು ಪಟೇಲ್ ಬಿ.ವೈ.)

ದಿನಾಂಕ: 16.04.2024

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದಂ.ನ್ಯಾ.ದಂಡಾಧಿಕಾರಿಗಳು, ಹುಣಸೂರು.